OS 31/2020

DW-1

ಸಾಕ್ಷಿಯನ್ನು ದಿನಾಂಕ 27.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರೀ ಬಿ ಎಸ್ ವಕೀಲರಿಂದಃ**

ದಿಃ 23.06.2022 ರಂದು ನಾನು ಮಾಡಿಕೊಂಡ ಖರೀದಿ ಪತ್ರದ ಮೂಲ ಪ್ರತಿ ಬ್ಯಾಂಕ್ ನಲ್ಲಿ ಅಡಮಾನ ಮಾಡಿರುತ್ತೇನೆ. ದಿಃ 23.06.2022 ರ ಕ್ರಯ ಪತ್ರ ಮಾಡುವ ಕಾಲಕ್ಕೆ ನಾನುವಾಣಿ ರವರು ಹೆಚ್ ಎಸ್ ಜೋಶಿರವರಿಗೆ ಮಾಡಿಕೊಟ್ಟ ಮೂಲ ಜಿ.ಪಿ.ಎ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಡಿ-134 ನೇದ್ದರಲ್ಲಿ ಹಾಜರುಪಡಿಸಿರುವ ವಾದ ಪತ್ರದ 15ನೇ ಪುಟದಲ್ಲಿ ಮೂಲ ವಾದಿಯಾದ ಜ್ಯೋತಿರವರು ನನ್ನ ಜೊತೆ ರಾಜಿ ಮಾಡಿಕೊಂಡಿದರ ಬಗ್ಗೆ ನಮೂದಿಸಲಾಗಿರುತ್ತದೆ ಎಂದರೆ ಸರಿ. ನಾನು ಮಾಡಿಕೊಂಡ ಕ್ರಯ ಪತ್ರಕ್ಕೆ ಮೂಲ ವಾದಿಯಾದ ಜ್ಯೋತಿರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಈಗಿನ ವಾದಿಗಳು ಪ್ರತಿವಾದಿ 6 ಮತ್ತು 7 ಆಗಿದ್ದರು ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವೆ ದಾಖಲುಪಡಿಸಿದ್ದರು ಸಹ ಉದ್ದೇಶ ಪೂರ್ವಕವಾಗಿ ನಾನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಖರೀದಿಗೆ ನೀಡಿದವರ ಕಡೆಯಿಂದ ಅವರು ಖರೀದಿಸಿದ ಬಗ್ಗೆ ಮೂಲ ಕ್ರಯ ಪತ್ರವನ್ನು ನಾನು ಪಡೆದುಕೊಂಡಿರುವುದಿಲ್ಲ. ದಾವಾ ಐಟಂ ನಂ. 1, 2 ಮತ್ತು ದಾವಾ ಐಟಂ ನಂ. 4ನೇ ಸ್ವತ್ತಿನಲ್ಲಿ 1 ಎಕರೆ 12 ಗುಂಟೆ ಜಮೀನುಗಳು ದೊಡ್ಡಸುಬ್ಬಪ್ಪರವರ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಸುಬ್ಬಪ್ಪ ರವರಿಗೆ ಪ್ರತಿವಾದಿ 1 ರಿಂದ 3 ಹಾಗೂ ಮೃತ ಮಹೇಶ ಹಾಗೂ ವಾದಿ 2 ಮತ್ತು 3ನೇ ರವರ ಮಕ್ಕಳುಗಳು ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ಮಾಡಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತುಗಳಲ್ಲಿ ಪ್ರತಿವಾದಿ 1 ರಿಂದ 3 ಹಾಗೂ ಮೃತ ಮಹೇಶ ಹಾಗೂ ವಾದಿ 2 ಮತ್ತು 3ನೇ ರವರ ಮಧ್ಯ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 1 ನೇ ಆಸ್ತಿಯಾದ ಸರ್ವೆ ನಂ. 339/1 ಕ್ಷೇತ್ರ 2 ಎಕರೆ 16 ಗುಂಟೆ ಜಮೀನು ನಿಪಿ-13 ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೆ 1ನೇ ಪ್ರತಿವಾದಿಯಾದ ನಾಗಪ್ಪ ರವರ ಹೆಸರಿನಲ್ಲಿ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 1 ನೇ ಸ್ವತ್ತು 1ನೇ ಪ್ರತಿವಾದಿಯಾದ ನಾಗಪ್ಪರವರ ಹೆಸರಿನಲ್ಲಿ ಇದ್ದರು ಸಹ ದಿಃ 06.12.2005 ರಂದು ಪ್ರತಿವಾದಿ 1 ರಿಂದ 3 ಹಾಗೂ ಮೃತ ಮಹೇಶ ಸೇರಿ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ಕ್ರಯ ಪತ್ರ ಮಾಡಿಕೊಳ್ಳುವ ಕಾಲಕ್ಕೂ ಸಹ ದಾವಾ ಐಟಂ ನಂ. 4 ನೇ ಸ್ವತ್ತು ವಿಭಾಗವಾಗದೇ ನಂಜಪ್ಪ ಮತ್ತು ಅವರ ಚಿಕ್ಕಪ್ಪನ ಮಗನಾದ ಬಸವರಾಜಪ್ಪ ರವರ ಹೆಸರಿನಲ್ಲಿ ಜಂಟಿಯಾಗಿ 02 ಎಕರೆ 21 ಗುಂಟೆ ಇತ್ತು ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ. 2 ನೇ ಸ್ವತ್ತು ನಿಡಿ-2 ಕ್ರಯ ಪತ್ರ ಆಗುವ ಕಾಲಕ್ಕೆ 2ನೇ ಪ್ರತಿವಾದಿಯಾದ ನಂಜಪ್ಪ ನ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ಮಾಡುವ ಕಾಲಕ್ಕೆಪ್ರತಿವಾದಿ 1 ರಿಂದ 3 ಹಾಗೂ ಮೃತ ಮಹೇಶ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ಮೂಲತಃ ದೊಡ್ಡಸುಬ್ಬಪ್ಪನ ಆಸ್ತಿಗಳಾಗಿರುವುದರಿಂದ ವಾದಿ 2 ಮತ್ತು 3 ನೇ ರವರಿಗೆ ಸದರಿ ಆಸ್ತಿಗಳಲ್ಲಿ ತಲಾ 1/6 ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆದ ಕ್ರಯ ಪತ್ರಗಳು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿಯಲ್ಲ ಎಂದು ಉತ್ತರಿಸಿದ (ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ

ನ್ಯಾಯಾಲಯದಲ್ಲಿ ಮೇಲ್ಮನವಿ ಚಾಲ್ತಿಯಲ್ಲಿದುದ್ದರಿಂದ ಸದರಿ ಆದೇಶದ ಅನುಗುಣವಾಗಿ ಈ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದು) ದಾವಾ ಐಟಂ ನಂ. 1 ಮತ್ತು 2 ನೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಮಾಡಿಕೊಂಡ ಕ್ರಯದ ಕರಾರು ಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ದಿಃ 11.11.2021 ರಂದು ದಾವಾ ಐಟಂ ನಂ. 1 ಮತ್ತು 2ನೇ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕಮಲೇಶ್ ಕುಮಾರ ರವರಿಗೆ ಕ್ರಯ ಪತ್ರ ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. 4 ಸ್ವತ್ತಿಗೆ ಸಂಬಂಧಿಸಿದಂತೆ ನಾನುವಾಣಿಯವರು ಹೆಚ್ ಎಸ್ ಜೋಶಿರವರಿಗೆ ಯಾವುದೇ ಜಿ.ಪಿ.ಎ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನುವಾಣಿರವರು ದಾವಾ ಐಟಂ ನಂ. 4 ಸ್ವತ್ತಿಗೆ ಸಂಬಂಧಿಸಿದಂತೆ ಕಮಲೇಶ್ ಕುಮಾರ್ ರವರಿಗೆ ದಿಃ 09.04.2018 ರಂದು ಜಿ.ಪಿ.ಎ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ–6 ರ ಕ್ರಯ ಪತ್ರವನ್ನು ದಿಃ 11.11.2021 ರಂದು ಆದ ಟ್ರೈಪಾರ್ಟೆಟ್ ಅಗ್ರಿಮೆಂಟ್ ಗೆ ವಿರುದ್ಧವಾಗಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 11.11.2021 ರಂದು ದಾವಾ ಐಟಂ ನಂ. 1 ಮತ್ತು 2 ನೇ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಮಾಡಿಕೊಂಡ ಕ್ರಯದ ಕರಾರು ಪತ್ರ ಸಹ ಟ್ರೈಪಾರ್ಟೆಟ್ ಅಗ್ರಿಮೆಂಟ್ ಗೆ ವಿರುದ್ಧವಾಗಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಾಡಿಕೊಂಡ ಕ್ರಯದ ಕರಾರು ಪತ್ರಗಳು ಮತ್ತು ಟ್ರೈಪಾರ್ಟೆಟ್ ಅಗ್ರಿಮೆಂಟ್ ವಾದಿಯರ ಹಿಸ್ಸೆಯ ಹಕ್ಕಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್

ಗುಂಡ್ಲುಪೇಟೆ